# ಮಾತೇ ಮುತ್ತು

★ ಎಲ್ಲಿ ಅಜ್ಞಾನ ಆಶೀರ್ವಾದ ಆಗಬಲ್ಲದೋ, ಅಲ್ಲಿ ಜ್ಞಾನಿಯಾಗಿರುವುದು ತಪ್ಪು.

-ಥಾಮಸ್ ಗ್ರೇ

★ ಅಜ್ಞಾನ ಒಂದು ದೋಷವಲ್ಲ. ಯಾಕೆಂದರೆ, ಹೊಸ ಹೊಸದನ್ನು ಕಂಡಾಗ ನಿರಂತರವಾದ ಸಂತೋಷ ಉಂಟಾಗುವುದು ಅದರಿಂದಲೇ.

-ರಾಬರ್ಟ್ ಲಿಂಡ್

★ ಒಂದು ರಾಜ್ಯದ ಭವಿಷ್ಯ ಅನೇಕ ವೇಳೆ ಮುಖ್ಯ ಮಂತ್ರಿಯ ಜೀರ್ಣಶಕ್ತಿಯನ್ನು ಅವಲಂಬಿಸಿದೆ.

-ವಾಲ್ಟೇರ್

★ 'ಮಹಡಿಯಿಂದ ಧುಮುಕು' ಎಂದು ಹೆಂಡತಿ ಹೇಳಿದಾಗ 'ಎತ್ತರ ಕಡಿಮೆ ಇರಲಿ' ಎಂದು ದೇವರನ್ನು ಬೇಡಿಕೋ!

-ಸ್ಪಾನಿಷ್ ಗಾದೆ

★ ದೊಡ್ಡವರ ಹೆಂಡತಿ ಎಲ್ಲರಿಗೂ ಅತ್ತೆ; ಬಡವನ ಹೆಂಡತಿ ಎಲ್ಲರಿಗೂ ಸೊಸೆ.

-ಗಾದೆ

★ ಅತ್ತೆ– ಸೊಸೆ ಒಂದೇ ಮನೆಯಲ್ಲಿರುವುದೆಂದರೆ ಒಂದೇ ಚೀಲದಲ್ಲಿ ಎರಡು ಬೆಕ್ಕುಗಳಿರುವಂತೆಯೇ.

-ಸ್ವಿಸ್ ಗಾದೆ

★ ಅದೃಷ್ಟ ಒಂದು ಸಂತೆಯಂತೆ; ಸ್ವಲ್ಪ ಹೊತ್ತಾದರೆ ಅದರ ಬೆಲೆ ಬಿದ್ದು ಹೋಗಬಹುದು.

-ಫ್ರಾನ್ಸಿಸ್ ಬೇಕನ್

★ ಗಾಳಿ ಹಾಗೂ ಅಲೆಗಳು ಯಾವಾಗಲೂ ದಕ್ಷರಾದ ನಾವಿಕರ ಕಡೆಯೇ ಇರುತ್ತವೆ.

-ಎಡ್ವರ್ಡ್ ಗಿಬ್ಬನ್

★ ಅತ್ತೆ– ಸೊಸೆ ಸಮಸ್ಯೆಗೆ ಮುಖ್ಯ ಎರಡು ಕಾರಣ: ಹಿಂದೆ ತಾನು ಸಹಿಸಿದ ಕಷ್ಟ ತನ್ನ ಸೊಸೆಯೂ ಸಹಿಸಬೇಕೆನ್ನುವುದು; ಮತ್ತೊಂದು, ತಮ್ಮ ಆಚಾರ–ವಿಚಾರದಿಂದ ಇನ್ನೊಂದು ಜೀವಕ್ಕೆ ಯಾವ ಕಷ್ಟವಾಗಬಹುದು ಎಂಬ ಯೋಚನೆಯೇ ಇಲ್ಲದ ವಿಚಾರಶೂನ್ಯತೆ.

-ವಿ.ಎಂ.ಇನಾಂದಾರ್

★ ಅದೃಷ್ಟ ಒಮ್ಮೊಮ್ಮೆ ದಡ್ಡನ ಬಳಿ ಬರುತ್ತದೆ; ಆದರೆ ಎಂದೂ ಅವನೊಡನೆ ಕುಳಿತಿರುವುದಿಲ್ಲ.

-ಜರ್ಮನ್ ಗಾದೆ

★ ಅದೃಷ್ಟ ಬಾಗಿಲ ಬಳಿ ನಿಂತು, ವಿವೇಕ ಒಳಗಿದೆಯೇ ಎನ್ನುತ್ತದೆ.

-ಡೇನಿಷ್ ಗಾದೆ

★ ಅದೃಷ್ಟ ನಿನ್ನನ್ನು ಹುಡುಕಿಕೊಂಡು ಬರದಿದ್ದರೆ, ನೀನು ಅದನ್ನು ಹುಡುಕಿಕೊಂಡು ಹೋದರೂ ಲಾಭ ಇಲ್ಲ.

-ರಷ್ಯನ್ ಗಾದೆ

★ ಕೆಳಗಿನವರ ಮೇಲೆ ಸವಾರಿ ಮಾಡುವವನು, ಮೇಲಿನವರ ಕಾಲು ನೆಕ್ಕುತ್ತಾನೆ.

-ಬೀಚಿ

★ ಈ ಪ್ರಪಂಚದಲ್ಲಿ ಎರಡು ದುರಂತಗಳಿವೆ: ಒಂದು ನಮಗೆ ಬೇಕಾದ್ದು ದೊರೆಯದೆ ಇರುವುದು, ಇನ್ನೊಂದು ದೊರೆತುಬಿಡುವುದು.

-ಆಸ್ಕರ್ ವೈಲ್ಡ್

★ ಎಲ್ಲರೂ ಮೇಲೇರುವುದು ಸುತ್ತು ಬಳಸು ಮೆಟ್ಟಿಲುಗಳ ಮೂಲಕವೇ.

-ಫ್ರಾನ್ಸಿಸ್ ಬೇಕನ್

★ ಅಧಿಕಾರ ಚಲಾಯಿಸುವವನಿರುವ ಕಡೆಯಲ್ಲೆಲ್ಲ, ಅಧಿಕಾರವನ್ನು ಪ್ರತಿಭಟಿಸುವವನೂ ಇರುತ್ತಾನೆ.

-ಆಸ್ಕರ್ ವೈಲ್ಡ್

★ ಎಲ್ಲ ಬಗೆಯ ಅಧಿಕಾರವೂ ಮನುಷ್ಯನನ್ನು ಕೆಡಿಸುತ್ತದೆ; ಮಿತಿ ಇಲ್ಲದ ಅಧಿಕಾರ ಮಿತಿ ಇಲ್ಲದೆ ಕೆಡಿಸುತ್ತದೆ.

-ಲಾರ್ಡ್ ಆ್ಯಕ್ಟನ್

★ ಅಧಿಕಾರಿ ಕಚೇರಿ ಅಲ್ಲದೆ ಬೇರೆ ಹೊತ್ತಿನಲ್ಲಿ ಅಧಿಕಾರವನ್ನು ಹೊತ್ತು ತಿರುಗಬಾರದು. ಯಾವ ಹಾವಾಡಿಗನೂ ಹಾವುಗಳನ್ನು ಊಟದ ಹೊತ್ತಿನಲ್ಲಿ ಪಕ್ಕಕ್ಕಿಟ್ಟುಕೊಳ್ಳುವುದಿಲ್ಲ; ಮಲಗುವಾಗ ಹಾಸಿಗೆಯಲ್ಲಿ ಬಿಟ್ಟುಕೊಳ್ಳುವುದಿಲ್ಲ.

-ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ನಗುನಗುತ್ತಾ ಕೆಲಸ ಮಾಡು. ಇತರರೂ ನಗುನಗುತ್ತಾ ಕೆಲಸ ಮಾಡುವಂತೆ ನೋಡಿಕೋ.

-ಎಂ.ಅರ್.ಶ್ರೀನಿವಾಸಮೂರ್ತಿ

★ ಪದವಿ, ಅಧಿಕಾರ, ಸಂಪತ್ತು– ಇವು ಒಳ್ಳೆಯದನ್ನು ಸಾಧಿಸುವುದಕ್ಕೆ ದಾರಿಗಳಾಗಬೇಕು. ಇವೇ ಗುರಿಯಾದರೆ ಬೇಡ.

-ಅಶ್ವತ್ಥ

★ ತನ್ನ ಅಧಿಕಾರಕ್ಕೆ ಮಾಮೂಲಾಗಿ ಸಲ್ಲತಕ್ಕ ಮರ್ಯಾದೆಗಳನ್ನು ತ್ಯಜಿಸಿ, ಅಧಿಕಾರದ ಗೌರವವನ್ನು ಅತಂತ್ರಕ್ಕೆ ತರಬಾರದು.

-ನವರತ್ನ ರಾಮರಾವ್

★ ಬೆಳೆಯುವುದೆಂದರೆ ಕಷ್ಟಗಳನ್ನು ಧೈರ್ಯದಿಂದ ಎದುರಿಸುವುದೇ ಆಗಿದೆ.

-ಮಾರ್ಷಾ ಸೆನಿಟಾರ್


